ಅನುಬಂಧ-೪

ಜಿಲ್ಲಾ ಪರಿಷತ್ತುಗಳ ಮತ್ತು ಮಂಡಳಿ ಪಂಚಾಯಿತಿಗಳ ಅಡಳಿತ ವೆಚ್ಚ
(೩೧-೧೨-೮೭ರ ವರೆಗೆ)

(ರೂ. ಲಕ್ಷಗಳಲ್ಲಿ)

	ಜಿಲ್ಲೆಯ ಹೆಸರು	ಜಿಲ್ಲಾ ಪರಿಷತ್ತು
೧.	ಬೆಂಗಳೂರು (ಗ್ರಾ)	೪೬.೩೭೦
೨.	ಚಿತ್ರದುರ್ಗ	೧೫೦.೬೦೦
೩.	ಕೋಲಾರ	೨೧.೬೧೯
೪.	ಶಿವಮೊಗ್ಗ	೨೭.೮೭೨
೫.	ತುಮಕೂರು	೨೫.೯೭೫
೬.	ಮೈಸೂರು	೨೪.೬೯೦
೭.	ಚಿಕ್ಕಮಂಗಳೂರು	೨೦.೧೧೨
೮.	ದಕ್ಷಿಣ ಕನ್ನಡ	೨೯.೨೬೯
೯.	ಹಾಸನ	೨೮.೬೦೦
೧೦.	ಕೊಡಗು	೧೩೧.೩೦೭
೧೧.	ಮಂಡ್ಯ	೨೦.೩೩೨
೧೨.	ಬೆಳಗಾಂ	೩೦.೫೯೮
೧೩.	ಬಿಜಾಪುರ	೨೦.೦೦೦
೧೪.	ಧಾರವಾಡ	೩೩.೧೦೦
೧೫.	ಉತ್ತರ ಕನ್ನಡ	೧೫೩೪.೦೪೦
೧೬.	ಗುಲ್ಬರ್ಗ	೩೮.೦೨೦
೧೭.	ಬಳ್ಳಾರಿ	೨೬ ೯೪೦
೧೮.	ಬೀದರ್	೨೩.೪೬೦
೧೯.	ರಾಯಚೂರು	೨೪.೫೬೦

ದಾವಣಗೆರೆಯ ಕ್ರೀಡಾಂಗಣವನ್ನು ಅಭಿವೃದ್ಧಿ ಪಡಿಸುವುದು

೮೧೯ ಶ್ರೀ ಪಂಪಾವತಿ (ದಾವಣಗೆರೆ).—ಮಾನ್ಯ ಯುವ ಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ದಾವಣಗೆರೆಯಲ್ಲಿ ಸುಸಜ್ಜಿತ ಕ್ರೀಡಾಂಗಣವಿಲ್ಲವೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರ ಕ್ರಮವೇನು ?

ಶ್ರೀ ಬಿ. ಎಲ್. ಶಂಕರ್ (ಯುವ ಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಈ ಕ್ರೀಡಾಂಗಣ ನಿರ್ಮಾಣವನ್ನು ದಾವಣಗೆರೆಯ ನಗರ ಸಭೆಯಂವರು ಮಾಡುತ್ತಿದ್ದಾರೆ, ಅವರ ಕೋರಿಕೆಯ ಮೇರೆಗೆ ಸರ್ಕಾರ ಇದುವರೆವಿಗೆ ೧ ಲಕ್ಷ ರೂಗಳನ್ನು ಧನಸಹಾಯವಾಗಿ ಬಿಡುಗಡೆ ಮಾಡಿದೆ.

ಚಿಕ್ಕಮಗಳೂರು ನಗರದ ೩ ಕಿ. ಮೀ. ಸುತ್ತ ಹಸಿರು ಪಟ್ಟಿ ಪ್ರದೇಶವನ್ನು ಘೋಷಿಸುವುದು

೭೦೦ ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಎ) ಸರ್ಕಾರ ನಗರಗಳ ಸುತ್ತ ಹಸಿರು ಪಟ್ಟಿ ಘೋಷಿಸಿದ್ದು ಇದು ಎಲ್ಲಾ ನಗರಗಳಿಗೂ ಏಕ ರೂಪವಾಗಿರುವುದರಿಂದ ಸಣ್ಣ ಪುಟ್ಟ ನಗರಗಳ ಬೆಳವಣಿಗೆಗೆ ಪ್ರತಿಕೂಲವಾಗಿರುತ್ತದೆಂಬ ಅಂಶ ಸರ್ಕಾರ ಗಮನಿಸಿದೆಯೆ ?

ಬಿ) ಹಾಗಿದ್ದಲ್ಲಿ ಚಿಕ್ಕಮಗಳೂರು ನಗರದ ೩ ಕಿ. ಮೀ. ಸುತ್ತಳತೆಗೆ ಮಾತ್ರ ಹಸಿರು ಪಟ್ಟಿ ಪ್ರದೇಶವನ್ನು ಘೋಷಿಸಿ ಬೆಳವಣಿಗೆಗೆ ಮಿತಿಗೊಳಿಸುವ ಬಗ್ಗೆ ಸರ್ಕಾರ ಯೋಚಿಸಬಾರದೇಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಎ) ಕರ್ನಾಟಕದಲ್ಲಿ ಕೇವಲ ೨೬ ಪ್ರಮುಖ ಪಂತ್ತು ತ್ವರಿತವಾಗಿ ಬೆಳೆಯುತ್ತಿರುವ ಪಟ್ಟಣಗಳಿಗೆ ಮಾತ್ರ ಹಸಿರು ಪಟ್ಟಿಯನ್ನು ಘೋಷಿಸಿದ್ದು ಈ ಹಸಿರು ಪಟ್ಟಿಯು ಎಲ್ಲಾ ಪಟ್ಟಣಗಳಿಗೂ ಏಕರೂಪವಾಗಿರುವುದಿಲ್ಲ. ಆದ್ದರಿಂದ ಸಣ್ಣ ಪುಟ್ಟ ನಗರಗಳ ಬೆಳವಣಿಗೆಗೆ ಪ್ರತಿಕೂಲವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬಿ) ಚಿಕ್ಕಮಗಳೂರು ನಗರದ ಸಂವ್ಯವಸ್ಥಿತ ಬೆಳವಣಿಗೆಗಾಗಿ ಸ್ಥೂಲಾಭಿವೃದ್ಧಿ ಯೋಜನೆ ತಯಾರಿಸಲಾಗಿದ್ದು, ಇದಕ್ಕೆ ಸರ್ಕಾರವು ಅನುಮೋದನೆಯನ್ನು ನೀಡಿದೆ, ಈ ಯೋಜನೆಯಲ್ಲಿ ನಗರದ ವಿವಿಧ ಬೆಳವಣಿಗೆಗೆ ಬೇಕಾದ ಪ್ರದೇಶವನ್ನು ಹೊರತುಪಡಿಸಿ, ಯೋಜನಾ ಪ್ರದೇಶದಲ್ಲಿ ಉಳಿದ ೩೭ ಚ. ಕಿ. ಮೀ. ಪ್ರದೇಶವನ್ನು ಹಸಿರು ಪಟ್ಟಿ ಎಂದು ನಿಗಧಿ ಪಡಿಸಲಾಗಿದೆ. ಈ ಹಸಿರು ಪಟ್ಟಿಯು ಎಲ್ಲೆಯು ಮುನಿಸಿಪಲ್ ಎಲ್ಲೆಯಿಂದ ಕೆಲವು ಕಡೆ ೩ ಕಿ. ಮೀ. ಗಿಂತ ಜಾಸ್ತಿಯೂ ಮತ್ತು ಕೆಲವು ಕಡೆ ೩ ಕಿ. ಮೀ. ಗಿಂತ ಕಡಿಮೆ ಆಗಲು ಇರುತ್ತದೆ.

ನಿಪ್ಪಾಣಿ ಪಟ್ಟಣಕ್ಕೆ ಕುಡಿಯುವ ನೀರಿನ ಅಭಾವವನ್ನು ನೀಗಿಸುವುದು

೯೨೨ ಶ್ರೀ ವೀರಕುಮಾರ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಎ) ನಿಪ್ಪಾಣಿ ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ನಿಪ್ಪಾಣಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯಂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಬಹಳ ದಿನಗಳಿಂದ ಉಳಿದಿರುವುದು ನಿಜವೇ

ಇ) ಹಾಗಿದ್ದಲ್ಲಿ ನಿಪ್ಪಾಣಿ ಪಟ್ಟಣದ ಕುಡಿಯುವ ನೀರಿನ ಅಭಾವವನ್ನು ಪರಿಹರಿಸಲು ಸರ್ಕಾರವು ಅತಿ ತೀವ್ರವಾಗಿ ನೀರಿನ ಯೋಜನೆಯಂನ್ನು ಅನುಮೋದಿಸುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ